## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** 2026-27ನೇ ಸಾಲಿನ ರಾಜ್ಯಪಾಲಯದ ವೇತನ ವೆಚ್ಚದ ಬಾಬ್ತುಗಳಿಗೆ ಜುಲೈ-2026 ರಿಂದ ಡಿಸೆಂಬರ್-2026ರ ಅವಧಿಯ ಆರು ತಿಂಗಳ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ :**

1. ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಆಇ 08 ಬಿಪಿಇ 2026, ದಿನಾಂಕ:01.04.2026.
2. ಸರ್ಕಾರದ ಆದೇಶ ಸಂಖ್ಯೆ: ಏಫ್ ಡಿ 02 ಟಿ.ಎಫ್.ಪಿ 2026, ದಿನಾಂಕ:02.04.2026.
3. ಸರ್ಕಾರದ ಆದೇಶ ಸಂಖ್ಯೆ:ಇಪಿ 109 ಯೋಯೋಕ 2026 ಬೆಂಗಳೂರು ದಿನಾಂಕ:10.04.2026
4. ನಿರ್ದೇಶಕರು(ಪ್ರ), ಮದ್ರಣ,ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:DPS/ACTA/FUNR1/1/2026-ACCT Dis54658/226 ದಿನಾಂಕ:29.05.2026.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1) ರ ಸರ್ಕಾರದ ಅಧಿಕೃತ ಜ್ಞಾಪನದಲ್ಲಿ ಕಾಲಕಾಲಕ್ಕೆ ಜಾರಿಯಲ್ಲಿರುವ ಮಿತವ್ಯಯದ ಸೂಚನೆಗಳನ್ನು ಮತ್ತು ಸಾಮಾನ್ಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ವಿಧಾನ ಮಂಡಲವು ಅನುಮೋದಿಸಿರುವ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕದನ್ವಯ, 2026-27ನೇ ಸಾಲಿನ ವಿವಿಧ ಯೋಜನೆ/ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ದಿನಾಂಕ: 1ನೇ ಏಪ್ರಿಲ್ 2026 ರಿಂದ ದಿನಾಂಕ: 31ನೇ ಮಾರ್ಚ್ 2027ರ ವರೆಗಿನ ಅವಧಿಯ ವೆಚ್ಚವನ್ನು ಭರಿಸಲು ಇಲಾಖಾ ಮುಖ್ಯಸ್ಥರು ಮತ್ತು ಅಂದಾಜು ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2) ರ ಸರ್ಕಾರದ ಆದೇಶದಲ್ಲಿ, 2026-27ನೇ ಆರ್ಥಿಕ ವರ್ಷದಲ್ಲಿ ವೇತನ ವೆಚ್ಚಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಮೊತ್ತದವರೆಗೆ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಅನುದಾನವನ್ನು ಬಿಡುಗಡೆ ಮಾಡಲು ಆಡಳಿತ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3) ರ ಸರ್ಕಾರದ ಆದೇಶದಲ್ಲಿ ರಾಜ್ಯಪಾಲಯದ ವೇತನ ವೆಚ್ಚಗಳ ಬಾಬ್ತಿನಡಿಯಲ್ಲಿ ನಿಗದಿಪಡಿಸಿರುವ ಅನುದಾನದಲ್ಲಿ ಏಪ್ರಿಲ್-2026 ರಿಂದ ಜೂನ್-2026 ರ ಅವಧಿಯ ಮೂರು ತಿಂಗಳ ಅನುದಾನ ರೂ.73767.94 ಲಕ್ಷಗಳನ್ನು (ಎಪ್ಪತ್ತ ಮೂರು ಸಾವಿರದ ಏಳು ನೂರ

ಅರವತ್ತೇಳು ಲಕ್ಷದ ತೊಂಬತ್ತ ನಾಲ್ಕು ಸಾವಿರ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಿ ನಿಯಮಾನುಸಾರ ಭರಿಸಲು, ಸಂಬಂಧಿಸಿದ ಇಲಾಖಾ ಮುಖ್ಯಸ್ಥರುಗಳಿಗೆ ಅನುಮತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4)ರ ಪತ್ರದಲ್ಲಿ 2026-27ನೇ ಸಾಲಿನ ಆರ್ಥಿಕ ವರ್ಷಕ್ಕೆ ಲೆಕ್ಕ ಶೀರ್ಷಿಕೆ: 2058-00-103-0-01 ಉಪ ಶೀರ್ಷಿಕೆ: 033 ದಿನಗೂಲಿ ನೌಕರರ ವೇತನ ವೆಚ್ಚಗಳಿಗೆ ಮೇ -2026 ಮಾಹೆಯ ವೇತನಕ್ಕೆ ಉಂಟಾಗಿರುವ ವೇತನ ಅನುದಾನದ ಕೊರತೆಯನ್ನು ಹಾಗೂ ಎರಡನೇ ತ್ರೈಮಾಸಿಕ ಅವಧಿಗೆ ಅನ್ವಯವಾಗುವ ಒಟ್ಟು ವೇತನ ಅನುದಾನದ ಮೊತ್ತವನ್ನು ಮುಂಗಡವಾಗಿ ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಪ್ರಸ್ತುತ, 2026-27ನೇ ಸಾಲಿನ ಆಯವ್ಯಯದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯವಲಯದ ವೇತನ ವೆಚ್ಚಗಳ ಬಾಬ್ತಿಗೆ ನಿಗದಿಪಡಿಸಿರುವ ಅನುದಾನದಲ್ಲಿ ಜುಲೈ-2026 ರಿಂದ ಡಿಸೆಂಬರ್-2026 ರವರೆಗಿನ ಆರು ತಿಂಗಳ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಇಪಿ 109 ಯೋೀಯೋಕ 2026 ಬೆಂಗಳೂರು

## ದಿನಾಂಕ: 04.06.2026

2026-27ನೇ ಸಾಲಿನ ಆಯವ್ಯಯದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ರಾಜ್ಯವಲಯದ ವೇತನ ವೆಚ್ಚಗಳ ಬಾಬ್ತಿನಡಿಯಲ್ಲಿ ನಿಗದಿಪಡಿಸಿರುವ ಅನುದಾನದಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಜುಲೈ-2026 ರಿಂದ ಡಿಸೆಂಬರ್-2026 ರ ಅವಧಿಯ ಆರು ತಿಂಗಳ ಅನುದಾನ **ರೂ.1,46,466.97** ಲಕ್ಷಗಳನ್ನು (ಒಂದು ನೂರಾ ನಲವತ್ತಾರು ಸಾವಿರದ ನಾಲ್ಕುನೂರಾ ಅರವತ್ತಾರು ಲಕ್ಷದ ತೊಂಬತ್ತೇಳು ಸಾವಿರ ರೂಪಾಯಿಗಳು ಮಾತ್ರ) ಈ ಕೆಳಕಂಡ ಕೋಷ್ಟಕದ ವಿವರಗಳಂತೆ ಬಿಡುಗಡೆ ಮಾಡಿ ನಿಯಮಾನುಸಾರ ಭರಿಸಲು, ಸಂಬಂಧಿಸಿದ ಇಲಾಖಾ ಮುಖ್ಯಸ್ಥರುಗಳಿಗೆ ಅನುಮತಿ ನೀಡಿ ಆದೇಶಿಸಿದೆ.

**2026-27ನೇ ಸಾಲಿನ ಆಯವ್ಯಯದ ರಾಜ್ಯವಲಯದ ಕಾರ್ಯಕ್ರಮಗಳಡಿ ವೇತನ ಬಾಬ್ತುಗಳಿಗೆ ಜುಲೈ-2026 ರಿಂದ ಡಿಸೆಂಬರ್-2026 ರವರೆಗಿನ ಮೂರು ತಿಂಗಳ ಅನುದಾನ ಬಿಡುಗಡೆ ವಿವರ**

ರೂ. ಲಕ್ಷಗಳಲ್ಲಿ

| ಕ್ರ. ಸಂ | ಲೆಕ್ಕ ಶೀರ್ಷಿಕೆ/ ಉಪ ಶೀರ್ಷಿಕೆ | ಕಾರ್ಯಕ್ರಮ | ಆಯವ್ಯಯ ಅಂದಾಜು 2026-27 | ಈಗಾಗಲೇ ಬಿಡುಗಡೆ ಮಾಡಿರುವ ಅನುದಾನ | 6 ತಿಂಗಳಿಗೆ ಬಿಡುಗಡೆ ಮಾಡಿರುವ ಅನುದಾನ |
|---|---|---|---|---|---|
| 1 | 2202-02-001-0-03 | ಶಾಲಾ ಶಿಕ್ಷಣ ಇಲಾಖೆ ಆಯುಕ್ತರು-ಬೆಂಗಳೂರು | | | |
| | 002 | ಮೂಲ ವೇತನ | 2985.00 | 746.25 | 1492.5 |

| | | | | | |
|---|---|---|---|---|---|
| | 011 | ತುಟ್ಟಿಭತ್ಯೆ | 754.00 | 188.50 | 377.00 |
| | 014 | ಇತರೆ ಭತ್ಯೆ | 604.00 | 151.00 | 302.00 |
| | | **ಒಟ್ಟು** | **4343.00** | **1085.75** | **2171.5** |
| 2 | **2202-02-001-0-05** | **ಶಾಲಾ ಶಿಕ್ಷಣ ಇಲಾಖೆ ಆಯುಕ್ತಾಲಯ-ಕಲಬುರ್ಗಿ** | | | |
| | 002 | ಮೂಲ ವೇತನ | 720.00 | 180.00 | 360.00 |
| | 011 | ತುಟ್ಟಿಭತ್ಯೆ | 186.00 | 46.50 | 93.00 |
| | 014 | ಇತರೆ ಭತ್ಯೆ | 121.00 | 30.25 | 60.5 |
| | | **ಒಟ್ಟು** | **1027.00** | **256.75** | **513.5** |
| 3 | **2202-02-001-0-06** | **ಶಾಲಾ ಶಿಕ್ಷಣ ಇಲಾಖೆ ಆಯುಕ್ತಾಲಯ-ಧಾರವಾಡ** | | | |
| | 002 | ಮೂಲ ವೇತನ | 1064.00 | 266.00 | 532.00 |
| | 011 | ತುಟ್ಟಿಭತ್ಯೆ | 266.00 | 66.50 | 133.00 |
| | 014 | ಇತರೆ ಭತ್ಯೆ | 179.00 | 44.75 | 89.5 |
| | | **ಒಟ್ಟು** | **1509.00** | **377.25** | **754.5** |
| 4 | **2202-02-001-0-07** | **ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ** | | | |
| | 002 | ಮೂಲ ವೇತನ | 1684.00 | 421.00 | 842.00 |
| | 011 | ತುಟ್ಟಿಭತ್ಯೆ | 428.00 | 107.00 | 214.00 |
| | 014 | ಇತರೆ ಭತ್ಯೆ | 364.00 | 91.00 | 182.00 |
| | | **ಒಟ್ಟು** | **2476.00** | **619.00** | **1238.00** |
| 5 | **2202-02-110-3-03** | **ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ನಿವಾಸಿ ಶಾಲೆ** | | | |
| | 103 | ಸಹಾಯಾನುದಾನ - ಸಾಮಾನ್ಯ | 325.00 | 81.25 | 81.25 |
| | | **ಒಟ್ಟು** | **325.00** | **81.25** | **81.25** |
| 6 | **2202-02-110-3-10** | **ಸೈನಿಕ ಶಾಲೆ ಬಿಜಾಪುರ** | | | |
| | 103 | ಸಹಾಯಾನುದಾನ - ಸಾಮಾನ್ಯ | 1525.00 | 381.25 | 0.00 |
| | | **ಒಟ್ಟು** | **1525.00** | **381.25** | **0.00** |

| | | | | | |
|---|---|---|---|---|---|
| 7 | **2202-02-110-3-11** | **ಸೈನಿಕ ಶಾಲೆ ಕೊಡಿಗೆ** | | | |
| | 103 | ಸಹಾಯಾನುದಾನ - ಸಾಮಾನ್ಯ | 525.00 | 131.25 | 131.25 |
| | | **ಒಟ್ಟು** | **525.00** | **131.25** | **131.25** |
| 8 | **2204-00-102-0-02** | **ಭಾರತ ಸೇವಾದಳ** | | | |
| | 101 | ಸಹಾಯಾನುದಾನ - ವೇತನಗಳು | 138.63 | 34.66 | 34.66 |
| | | **ಒಟ್ಟು** | **138.63** | **34.66** | **34.66** |
| 9 | **2204-00-103-0-11** | **ಭಾರತ ಸ್ಕೌಟ್ಸ್ ಸಂಸ್ಥೆ** | | | |
| | 101 | ಸಹಾಯಾನುದಾನ - ವೇತನಗಳು | 219.09 | 54.77 | 54.77 |
| | 115 | ಸಹಾಯಾನುದಾನ - ಗುತ್ತಿಗೆ/ಹೊರಗುತ್ತಿಗೆ | 18.00 | 4.50 | 4.50 |
| | | **ಒಟ್ಟು** | **237.09** | **59.27** | **59.27** |
| | | **ಸಮಗ್ರ ಶಿಕ್ಷಣ ಕರ್ನಾಟಕ (SSK)** | | | |
| 10 | **2202-01-113-0-01** | **ಕೇ.ಪು.ಯೋ-ಸಮಗ್ರ ಶಿಕ್ಷಣ ಕರ್ನಾಟಕ (ರಾಜ್ಯದ ಪಾಲು)** | | | |
| | 002 | ಮೂಲ ವೇತನ | 639.00 | 159.75 | 319.5 |
| | 011 | ತುಟ್ಟಿಭತ್ಯೆ | 175.00 | 43.75 | 87.5 |
| | 014 | ಇತರೆ ಭತ್ಯೆ | 145.00 | 36.25 | 72.5 |
| | | **ಒಟ್ಟು** | **959.00** | **239.75** | **479.5** |
| | | **ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ (DSERT)** | | | |
| 11 | **2202-01-107-0-06** | **ಸರ್ಕಾರೇತರ ಉಪಾಧ್ಯಾಯರ ತರಬೇತಿ ಸಂಸ್ಥೆಗಳು** | | | |
| | 101 | ಸಹಾಯಾನುದಾನ - ವೇತನಗಳು | 1758.99 | 439.75 | 879.5 |
| | | **ಒಟ್ಟು** | **1758.99** | **439.75** | **879.5** |
| 12 | **2202-01-107-0-09** | **ಶಿಕ್ಷಕರ ತರಬೇತಿ ಮತ್ತು ವೃತ್ತೀಕರಣ ತರಬೇತಿ ಕೇಂದ್ರಗಳು** | | | |
| | 002 | ಮೂಲ ವೇತನ | 2216.00 | 554.00 | 1108.00 |
| | 011 | ತುಟ್ಟಿಭತ್ಯೆ | 554.00 | 138.50 | 277.00 |
| | 014 | ಇತರೆ ಭತ್ಯೆ | 283.00 | 70.75 | 141.5 |
| | | **ಒಟ್ಟು** | **3053.00** | **763.25** | **1526.5** |

| | | | | | |
|---|---|---|---|---|---|
| 13 | 2202-02-001-0-04 | ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ನಿರ್ದೇಶಕರು | | | |
| | 002 | ಮೂಲ ವೇತನ | 751.00 | 187.75 | 375.5 |
| | 011 | ತುಟ್ಟಿಭತ್ಯೆ | 188.00 | 47.00 | 94.00 |
| | 014 | ಇತರೆ ಭತ್ಯೆ | 168.00 | 42.00 | 84.00 |
| | 034 | ಗುತ್ತಿಗೆ/ಹೊರಗುತ್ತಿಗೆ | 80.87 | 20.22 | 40.44 |
| | | **ಒಟ್ಟು** | **1187.87** | **296.97** | **593.94** |
| 14 | 2202-80-003-0-04 | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ/ಶಿಕ್ಷಕರ ಶಿಕ್ಷಣ | | | |
| | 002 | ಮೂಲ ವೇತನ | 12363.00 | 3090.75 | 6181.5 |
| | 011 | ತುಟ್ಟಿಭತ್ಯೆ | 3091.00 | 772.75 | 1545.5 |
| | 014 | ಇತರೆ ಭತ್ಯೆ | 1417.00 | 354.25 | 708.5 |
| | 033 | ದಿನಗೂಲಿ | 4.01 | 1.00 | 2.00 |
| | | **ಒಟ್ಟು** | **16875.01** | **4218.75** | **8437.5** |
| 15 | 2202-04-001-0-01 | ಲೋಕ ಶಿಕ್ಷಣ-ರಾಜ್ಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಪೂರ್ವ ಸಿದ್ದತಾ ಚಟುವಟಿಕೆಗಳು-ರಾಜ್ಯ ಮಟ್ಟದಲ್ಲಿ ಆಡಳಿತಾತ್ಮಕ ರಚನೆಯ ಬಲವರ್ಧನೆ | | | |
| | 002 | ಮೂಲ ವೇತನ | 196.00 | 49.00 | 98.00 |
| | 011 | ತುಟ್ಟಿಭತ್ಯೆ | 49.00 | 12.25 | 24.5 |
| | 014 | ಇತರೆ ಭತ್ಯೆ | 43.00 | 10.75 | 21.5 |
| | 034 | ಗುತ್ತಿಗೆ/ಹೊರಗುತ್ತಿಗೆ | 9.07 | 2.27 | 4.54 |
| | | **ಒಟ್ಟು** | **297.07** | **74.27** | **148.54** |
| | | **ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ** | | | |
| 16 | 2202-02-001-0-01 | ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು | | | |
| | 002 | ಮೂಲ ವೇತನ | 2131.00 | 532.75 | 1065.5 |
| | 011 | ತುಟ್ಟಿಭತ್ಯೆ | 546.00 | 136.50 | 273.00 |
| | 014 | ಇತರೆ ಭತ್ಯೆ | 329.00 | 82.25 | 164.5 |
| | 034 | ಗುತ್ತಿಗೆ/ಹೊರಗುತ್ತಿಗೆ | 222.93 | 55.73 | 111.46 |
| | | **ಒಟ್ಟು** | **3228.93** | **807.23** | **1614.46** |

| | | | | | |
|---|---|---|---|---|---|
| 17 | **2202-02-109-0-13** | **ಸರ್ಕಾರಿ ಪದವಿ ಪೂರ್ವ ಕಾಲೇಜುಗಳು** | | | |
| | 002 | ಮೂಲ ವೇತನ | 117839.00 | 29459.75 | 58919.5 |
| | 011 | ತುಟ್ಟಿಭತ್ಯೆ | 29460.00 | 7365.00 | 14730.00 |
| | 014 | ಇತರೆ ಭತ್ಯೆ | 12342.00 | 3085.50 | 6171.00 |
| | 324 | ಗೌರವಧನ | 8520.40 | 2130.10 | 4260.2 |
| | | **ಒಟ್ಟು** | **168161.40** | **42040.35** | **84080.7** |
| 18 | **2202-02-110-3-01** | **ಪದವಿ ಪೂರ್ವ ಕಾಲೇಜುಗಳಿಗೆ ಸಹಾಯಾನುದಾನ** | | | |
| | 101 | ಸಹಾಯಾನುದಾನ - ವೇತನಗಳು | 73674.70 | 18418.68 | 36837.36 |
| | | **ಒಟ್ಟು** | **73674.70** | **18418.68** | **36837.36** |
| 19 | **2205-00-105-0-01** | **ಸಾರ್ವಜನಿಕ ಗ್ರಂಥಾಲಯ-ನಿರ್ದೇಶನ ಮತ್ತು ಆಡಳಿತ** | | | |
| | 002 | ಮೂಲ ವೇತನ | 5085.00 | 1271.25 | 2542.5 |
| | 011 | ತುಟ್ಟಿಭತ್ಯೆ | 1278.00 | 319.50 | 639.00 |
| | 014 | ಇತರೆ ಭತ್ಯೆ | 723.00 | 180.75 | 361.5 |
| | 033 | ದಿನಗೂಲಿ | 208.17 | 52.04 | 104.08 |
| | | **ಒಟ್ಟು** | **7294.17** | **1823.54** | **3647.08** |
| | | **ಮುದ್ರಣ, ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ನಿರ್ದೇಶನಾಲಯ** | | | |
| 20 | **2058-00-103-0-01** | **ಸರ್ಕಾರಿ ಮುದ್ರಣಾಲಯಗಳು** | | | |
| | 002 | ಮೂಲ ವೇತನ | 3672.00 | 918.00 | 1836.00 |
| | 011 | ತುಟ್ಟಿಭತ್ಯೆ | 918.00 | 229.50 | 459.00 |
| | 014 | ಇತರೆ ಭತ್ಯೆ | 919.00 | 229.75 | 459.5 |
| | 033 | ದಿನಗೂಲಿ | 727.94 | 181.99 | 363.98 |
| | 034 | ಗುತ್ತಿಗೆ/ಹೊರಗುತ್ತಿಗೆ | 238.97 | 59.74 | 119.48 |
| | | **ಒಟ್ಟು** | **6475.91** | **1618.98** | **3237.96** |
| | | **ಒಟ್ಟು ಮೊತ್ತ** | **295071.77** | **73767.95** | **146466.97** |

**ಅನುದಾನ ಬಳಕೆಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು ಪಾಲಿಸಬೇಕಾದ ಷರತ್ತುಗಳು:**

1. ಬಿಡುಗಡೆ ಮಾಡಲಾಗಿರುವ ಅನುದಾನದ ಬಳಕೆಯ ಬಗ್ಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು ನಿಯಮಾನುಸಾರ ಲೆಕ್ಕ ಪತ್ರಗಳನ್ನು ಇಡತಕ್ಕದ್ದು.

2. ಒದಗಿಸಲಾದ ಅನುದಾನದಲ್ಲಿ ಪ್ರಸಕ್ತ ಆರ್ಥಿಕ ಸಾಲಿನ ವೇತನ ವೆಚ್ಚಗಳನ್ನು ಮಾತ್ರ ಭರಿಸತಕ್ಕದ್ದು, ಯಾವುದೇ ಕಾರಣಕ್ಕೂ ಹಿಂದಿನ ಆರ್ಥಿಕ ಸಾಲಿನ ವೇತನ ವೆಚ್ಚಗಳನ್ನು ಭರಿಸತಕ್ಕದ್ದಲ್ಲ.

3. ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಅರ್ಹತೆಗೆ ಅನುಗುಣವಾಗಿ ವೇತನವನ್ನು ಸಂಬಂಧಿಸಿದ ಡಿ.ಡಿ.ಓ ಗಳು ಬಿಡುಗಡೆಗೊಳಿಸಿರುವುದನ್ನು ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಖಚಿತಪಡಿಸಿಕೊಳ್ಳತಕ್ಕದ್ದು.

4. ಇಲಾಖಾ ಮುಖ್ಯಸ್ಥರು ಅರ್ಹತೆಗೆ ಅನುಗುಣವಾಗಿ ವೇತನ ಬಿಡುಗಡೆ ಮಾಡುವಲ್ಲಿ ಯಾವುದೇ ವಿಳಂಬವಾದರೆ ಸಂಬಂಧಿಸಿದ ಡಿ.ಡಿ.ಓ ಗಳನ್ನ ನೇರ ಹೊಣೆಗಾರರನ್ನಾಗಿ ಮಾಡತಕ್ಕದ್ದು ಮತ್ತು ಕೆ.ಸಿ.ಎಸ್.ಆರ್ (ಸಿ.ಸಿ.ಎ) ನಿಯಮಗಳ ಪ್ರಕಾರ ಕ್ರಮಕೈಗೊಳ್ಳತಕ್ಕದ್ದು.

5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಅರ್ಹತೆಗೆ ಅನುಗುಣವಾಗಿ ವೇತನ ಪಾವತಿಯನ್ನು ಖಚಿತಪಡಿಸಿಕೊಳ್ಳಲು ಪ್ರತಿ ತಿಂಗಳು 10ನೇ ತಾರೀಖಿನೊಳಗೆ ಎಲ್ಲಾ ಡಿ.ಡಿ.ಓ ಗಳೊಂದಿಗೆ ವಿಡಿಯೋ ಕಾನ್ಸರೆನ್ಸ್ (VC) ಅನ್ನು ನಡೆಸತಕ್ಕದ್ದು. ವೇತನ ಪಾವತಿಗೆ ವಿಳಂಬವಾದ ಸಂದರ್ಭದಲ್ಲಿ ಕೆ.ಸಿ.ಎಸ್.ಆರ್ (ಸಿ.ಸಿ.ಎ) ನಿಯಮಗಳಂತೆ ಶಿಸ್ತು ಕ್ರಮಕೈಗೊಳ್ಳತಕ್ಕದ್ದು.

6. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾವುದೇ ಇತರ ಯೋಜನೆಯ ನಿಧಿ/ಅನುದಾನದೊಂದಿಗೆ ಈ ಸಂಬಳದ ಪಾವತಿಯಲ್ಲಿ ಯಾವುದೇ ಪುನರಾವರ್ತನೆ ಇಲ್ಲವೆಂದು ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಒದಗಿಸಲಾದ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಒದಗಿಸಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು, ಇತರೆ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದಲ್ಲ.

7. ಪ್ರತಿ ತಿಂಗಳು 12ನೇ ತಾರೀಖು ಅಥವಾ ಎಂ.ಪಿಕ್ ಸಭೆ ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕದೊಳಗಾಗಿ ವೇತನಾನುದಾನ ಬಳಕೆ ಪ್ರಮಾಣ ಪತ್ರವನ್ನು ಎಲ್ಲಾ ಇಲಾಖಾ ಮುಖ್ಯಸ್ಥರುಗಳು ನಿಗದಿತ ನಮೂನೆಯಲ್ಲಿ ಪಡೆಯತಕ್ಕದ್ದು. ಎರಡನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆಗೂ ಮುನ್ನ ಕಡ್ಡಾಯವಾಗಿ ಅನುದಾನ ಬಳಕೆಯ ವಿವರ ಮತ್ತು ಬೇಡಿಕೆ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸತಕ್ಕದ್ದು.

8. ಪ್ರಸ್ತುತ ದ್ವಿತೀಯ ಮತ್ತು ತ್ರಿತೀಯ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆಗೊಳಿಸಲಾಗಿದ್ದು, ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆಗೂ ಮುನ್ನ ಕಡ್ಡಾಯವಾಗಿ ಅನುದಾನ ಬಳಕೆಯ ವಿವರ ಮತ್ತು ಬೇಡಿಕೆ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಅನುದಾನ ಬಿಡುಗಡೆಗೊಳಿಸಲಾಗುವುದಿಲ್ಲ.

9. ಮೇಲ್ಕಂಡಂತೆ ಬಿಡುಗಡೆಗೊಳಿಸಿರುವ ಅನುದಾನದ ಅಡಿಯಲ್ಲಿ ಭರಿಸಲಾಗುವ ವೆಚ್ಚದ ವಿವರಗಳನ್ನು ಪ್ರತಿ ಮಾಹೆ ಅವಲೋಕನ ತಂತ್ರಾಂಶದಲ್ಲಿ (ಹೊಸ ಡಿಸಿಷನ್ ಸಪೋರ್ಟಿಂಗ್ ಸಿಸ್ಟಂ) ಅಂಕಿ-ಅಂಶಗಳನ್ನು ಇಂದೀಕರಿಸತಕ್ಕದ್ದು.

10. ವೇತನ ವೆಚ್ಚಗಳಿಗಾಗಿ ಅನುದಾನ ಬಿಡುಗಡೆ ಸಂಬಂಧ ತಮ್ಮ ಹಂತದಲ್ಲಿ ಹೊರಡಿಸುವ ಜ್ಞಾಪನಾ ಹಾಗೂ ಸದರಿ ಆದೇಶ ಪ್ರತಿಯನ್ನು ಎಲ್ಲಾ ಇಲಾಖಾ ಮುಖ್ಯಸ್ಥರುಗಳು ತಮ್ಮ ಇಲಾಖಾ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ; ಆಇ 2 ಟಿ.ಎಫ್.ಪಿ 2026 ದಿನಾಂಕ:02.04.2026 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

04/04/26

**(ಶುಭಮಂಗಳ ಆರ್ ವಿ)**
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

**ಇವರಿಗೆ;**

1. ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 & 2) ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ), ವಿಧಾನ ಸೌಧ, ಬೆಂಗಳೂರು
3. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
4. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು.
5. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
6. ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಬೆಂಗಳೂರು.
7. ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
8. ಆಯುಕ್ತರು, ಖಜಾನೆ ನಿರ್ದೇಶನಾಲಯ, ಕೆ.ಪಿ.ಸಿ.ಎಲ್ ಹಸಿರು ಕಟ್ಟಡ, ಅರಮನೆ ರಸ್ತೆ, ಬೆಂಗಳೂರು
9. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ.
10. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ.
11. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು.
12. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬನಶಂಕರಿ, ಬೆಂಗಳೂರು.
13. ನಿರ್ದೇಶಕರು, ಸರ್ಕಾರಿ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು
14. ಉಪ ನಿರ್ದೇಶಕರು, ಖಜಾನೆ ಗಣಕ ಕೇಂದ್ರ, ಕೆ.ಪಿ.ಸಿ.ಎಲ್ ಹಸಿರು ಕಟ್ಟಡ, ಅರಮನೆ ರಸ್ತೆ, ಬೆಂಗಳೂರು
15. ಸಂಬಂಧಿಸಿದ ಪ್ರಾಂಶುಪಾಲರು ಡಯಟ್/ಸಿಟಿಇ, ಶಾಲಾ ಶಿಕ್ಷಣ ಇಲಾಖೆ.

16. ಸಂಬಂಧಿಸಿದ ಜಿಲ್ಲಾ ಹಾಗೂ ತಾಲ್ಲೂಕು ಖಜಾನೆಗಳು

17. ಕರ್ನಾಟಕ ರಾಜ್ಯ ಪತ್ರ/ಕಚೇರಿ ಕಡತ ಪ್ರತಿ/ಹೆಚ್ಚುವರಿ ಪ್ರತಿಗಳು.

18. ಸಂಯೋಜಕರು, ಇ-ಆಡಳಿತ ಘಟಕ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ವೆಬ್‌ಸೈಟ್ ಪ್ರಕಟಣೆಗಾಗಿ.

**ಪ್ರತಿ ಮಾಹಿತಿಗಾಗಿ.**

1. ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು
3. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.